


# ಉಪ್ಪು

ತೊಂಬತ್ತು ವರ್ಷಗಳ ಹಿಂದೆ
ಕಡಲಿನ ಅವಿಶ್ರಾಂತ ಅಲೆಗಳ ಚವರಿನಿಂದ
ನಾವು ಒಂದು ಮುಷ್ಟಿ
ಉಪ್ಪು ತೆಗೆದೆವು.
ಮೇಲೆತ್ತಿದ ಬಡಕಲು ಕೈಯಲ್ಲಿ
ಮೃದುಬಿಳಿಯ ಹೂವು.

ಆಗ ಆ ಒಂದು ಕ್ಷಣದಲ್ಲಿ ಆ ಒಂದು ಕೈ
ಆರು ಸಾವಿರ ಸಂಕೋಲೆ ಬಿಗಿದ ಕೈಗಳಾಗಿ
ಬದಲಾಯಿತು:
'ಸೂರ್ಯ ಮುಳುಗದ ಸಾಮ್ರಾಜ್ಯ'ದ ಎದುರು ಎತ್ತಿದ
ಲಕ್ಷಾಂತರ ಮುಷ್ಠಿಗಳಾದವು.
ಆ ದಿನದಿಂದ ನಮ್ಮ ನಾಡಿನಲ್ಲಿ
ಸತ್ಯಕ್ಕೆ ಇನ್ನೊಂದು ಹೆಸರು:
'ಸೆರೆಯಲ್ಲಿ ಕೂಡಿಟ್ಟ ಉಪ್ಪು'

ರಾಮ, ಅಲ್ಲಾ, ಖುದಾ, ಮೆಸ್ಸಾಯ:
ಆ ಉಪ್ಪೇ ನಮಗೆಲ್ಲವೂ ಆಗಿತ್ತು
ಕಡಲನೊರೆಯಿಂದ ಮೂಡಿ ಬಂದ
ಆ ಪ್ರವಾದಿನಿ ನಮ್ಮಡುಗೆಮನೆಗೆ ಬಂದಳು
ಬಿಳಿರೆಕ್ಕೆಗಳ ಆ ದೇವತೆ,
ನಮ್ಮೆಲ್ಲ ಕನಸುಗಳ ಅನಂತ ರಕ್ಷಕಿ,
ಒಂದು ಬೊಗಸೆ ತುಂಬ ಸ್ವಾತಂತ್ರ್ಯ
ಒಂದು ಬೊಗಸೆ ತುಂಬ ಸಮಾನತೆ
ಒಂದು ಬೊಗಸೆ ತುಂಬ ಪ್ರೀತಿ
ಒಂದು ಬೊಗಸೆ ತುಂಬ ಕರುಣೆ
ಉಪ್ಪಿನಲ್ಲಿ ಮಾಡಿದ ಬುದ್ಧ.

ಈ ದಿನ ಮತ್ತೆ ನಾವು
ಕಡಲಿನ ಕಡುನೀಲಿ ಬಣ್ಣದ ಹಿನ್ನೆಲೆಯಲ್ಲಿ
ಉಪ್ಪಿನ ಬಿಳಿ ಬಾವುಟ ಎತ್ತಿ ಹಿಡಿದಿದ್ದೇವೆ.
ಕಡುಗಪ್ಪು ಕೂದಲಿನ ಬಿಡುಗಡೆಯ ದೃಶ್ಯ
ನಿಧಾನವಾಗಿ ಕರಗಿ ಕಾಣೆಯಾಗುತ್ತಿದೆ.
ನಮ್ಮ ಪುಟ್ಟ ಕೈಗಳಿಂದ ಜಾರಿಹೋಗುತ್ತಿದೆ ಸ್ವಾತಂತ್ರ್ಯ.
ನ್ಯಾಯ, ಸಮಾನತೆಗಳ ಮಂಜು–ಮಂಜು ವಿವರಣೆಗಳನ್ನು
ಈಗಲೂ ನಮ್ಮ ಕಿವಿಗಳು ಕೇಳುತ್ತಿವೆ.
ದುಡಿಮೆಯಿಂದ ಗಂಟುಗಂಟಾದ ನಮ್ಮ ಕೈ ಮೇಲೆತ್ತಿದೆ
ನಮ್ಮ ಕಂಬನಿಗಳಲ್ಲಿ, ಮಾಂಸಮಜ್ಜೆಗಳಲ್ಲಿ ಇನ್ನೂ ಇದೆ,
ಉಪ್ಪು–ಬೆವರಿನ ಪರಿಮಳ,

ಕೈಯ ತುಂಬ ಕಪ್ಪು–ಅಂಚಿನ ನ್ಯಾಯದ ಉಪ್ಪು
ಅದರ ನಡುನಡುವೆ ಕ್ರಾಂತಿಯ, ದಂಗೆಯ ಮರಳು ಕಣ್ಣು.
ಇದು ತೊಂಬತ್ತು ವರ್ಷಗಳ ಹಿಂದೆ ದಂಡಿಯಲ್ಲಿ
ಗಾಂಧೀ ಮೇಲೆತ್ತಿ ತೋರಿಸಿದ

**ಮೂಲ ಕವಿತೆಯ ಹೆಸರು:** Salt **(ಸಾಲ್ಟ್)**